# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೊರ ರಾಜ್ಯಗಳಾದ ಪಂಜಾಬ್, ಹರಿಯಾಣ, ಕೇರಳ, ಮಹಾರಾಷ್ಟ್ರ, ಗುಜರಾತ್, ಆಂಧ್ರ ಮತ್ತು ದೆಹಲಿ ರಾಜ್ಯಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಸ್ಯಾನಿಟೇಷನ್ ವ್ಯವಸ್ಥೆ ಹಾಗೂ ಸ್ಯಾನಿಟೇಷನ್ ಕಾರ್ಮಿಕರು/ ಸ್ವಚ್ಛತಾ ಕಾರ್ಮಿಕರ ಪ್ರಸ್ತುತ ಸ್ಥಿತಿಗತಿಗಳ ಕುರಿತು ಅಧ್ಯಯನ ಪ್ರವಾಸ ನಡೆಸಲು ಅನುಮತಿ ನೀಡುವ ಕುರಿತು.

ಓದಲಾಗಿದೆ. ಕಾರ್ಯದರ್ಶಿ, ಕರ್ನಾಟಕ ಸಫಾಯಿ ಕರ್ಮಚಾರಿಗಳ ಆಯೋಗ, ಇವರ ಏಕ ಕಡತ ಸಂಖ್ಯೆ:ಕರಾಸಕಆ/ಲೆಕ್ಕಶಾಖೆ/ಸಿಆರ್-17/2022-23,ದಿನಾಂಕ:05-04-2022.

******

ಪ್ರಸ್ತಾವನೆ:

ಮೇಲೆ ಓದಲಾದ ಏಕ ಕಡತ ಪ್ರಸ್ತಾವನೆಯಲ್ಲಿ ಕಾರ್ಯದರ್ಶಿ, ಕರ್ನಾಟಕ ಸಫಾಯಿ ಕರ್ಮಚಾರಿಗಳ ಆಯೋಗ ಇವರು ಮ್ಯಾನ್‌ಹೋಲ್, ಸೆಪ್ಟಿಕ್ ಟ್ಯಾಂಕ್‌ಗಳಲ್ಲಿ ಕಾರ್ಯನಿರ್ವಹಿಸುವಾಗ ಸಂಭವಿಸುತ್ತಿದ್ದ ಸಾವು-ನೋವುಗಳನ್ನು ತಡೆಗಟ್ಟುವ ಉದ್ದೇಶದಿಂದ **Prohibition of Employment as Manual Scavengers and their Rehabilitation Act 2013** ರಲ್ಲಿ ಕಾಯ್ದೆ ಮತ್ತು ನಿಯಮವನ್ನು ಭಾರತ ಸರ್ಕಾರವು ಜಾರಿಗೆ ತಂದಿತು. ಇದರ ಮೂಲ ಉದ್ದೇಶ ಯಾವುದೇ ಕಾರಣಕ್ಕೂ ಮ್ಯಾನ್‌ಹೋಲ್ ಮತ್ತು ಅಪಾಯಕಾರಿ ಸ್ವಚ್ಛತಾ ಕಾರ್ಯಕ್ಕೆ ಮಾನವ ಶಕ್ತಿಯನ್ನು ಬಳಸದೇ ಯಂತ್ರೋಪಕರಣಗಳನ್ನು ಬಳಸುವ ಮೂಲಕ ಈ ಅನಿಷ್ಠ ಪದ್ಧತಿಯನ್ನು ನಿರ್ಮೂಲನೆ ಮಾಡುವುದಾಗಿದೆ. ಆದರೆ, ಈ ಕಾಯ್ದೆ ಜಾರಿಗೆ ಬಂದು **09** ವರ್ಷಗಳು ಕಳೆದರೂ ಸಹ ಅಷ್ಟೊಂದು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದೇ 1995 ರಿಂದ ಇಲ್ಲಿಯವರೆಗೆ ಮ್ಯಾನ್‌ಹೋಲ್ ಮತ್ತು ಅಪಾಯಕಾರಿ ಸ್ವಚ್ಛತಾ ಕೆಲಸವನ್ನು ನಿರ್ವಹಿಸುವಾಗ 90 ಕಾರ್ಮಿಕರು ಮೃತಪಟ್ಟಿರುವುದು ಅತ್ಯಂತ ಶೋಚನೀಯವಾಗಿರುತ್ತದೆ.

ರಾಜ್ಯ ಸರ್ಕಾರದಲ್ಲಿ ಸಫಾಯಿ ಕರ್ಮಚಾರಿ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಾಮಾಜಿಕ, ಆರ್ಥಿಕ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದ್ದರೂ ಸಹ ಹೆಚ್ಚಿನ ಪ್ರಮಾಣದಲ್ಲಿ ಸುಧಾರಣೆ ಕಂಡುಬಂದಿರುವುದಿಲ್ಲ ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಾವಿನ ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿಲ್ಲವಾದ ಕಾರಣ ಹೊರದೇಶ ಮತ್ತು ಹೊರರಾಜ್ಯಗಳಾದ ಪಂಜಾಬ್, ಹರಿಯಾಣ, ಕೇರಳ, ಮಹಾರಾಷ್ಟ್ರ, ಗುಜರಾತ್, ಆಂಧ್ರ ಮತ್ತು ದೆಹಲಿ ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ ಸ್ಯಾನಿಟೇಶನ್ ವ್ಯವಸ್ಥೆ, ಸ್ಕ್ಯಾವೆಂಜರ್ ಕ್ಲೀನಿಂಗ್ ಪದ್ಧತಿ ಹಾಗೂ ಸ್ಯಾನಿಟೇಶನ್ ಕಾರ್ಮಿಕರು/ಸ್ವಚ್ಛತಾ ಕಾರ್ಮಿಕರಿಗೆ ಆಯಾ ರಾಜ್ಯಗಳಲ್ಲಿ ಜಾರಿಯಲ್ಲಿರುವ ಸರ್ಕಾರಿ ಸವಲತ್ತುಗಳಾದ, ವಸತಿ, ಶಿಕ್ಷಣ, ಆರೋಗ್ಯ, ತರಬೇತಿ, ಕಾರ್ಮಿಕರು ಧರಿಸುವ ಸುರಕ್ಷತಾ ಪರಿಕರಗಳು, ವೇತನ, ವಿಶ್ರಾಂತಿ ಕೊಠಡಿ, ಸಮವಸ್ತ್ರ, ಇತ್ಯಾದಿಗಳ ವಿಷಯಗಳ ಕುರಿತು ಅಧ್ಯಯನ ಪ್ರವಾಸ ನಡೆಸಿ ಅವುಗಳನ್ನು ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಯಾನಿಟೇಶನ್ ಮತ್ತು

ಸ್ವಚ್ಛತಾ ಕಾರ್ಮಿಕರ ಸರ್ವತೋಮುಖ ಅಭಿವೃದ್ಧಿಗಾಗಿ ಹೊಸ ಹೊಸ ಯೋಜನೆಗಳನ್ನು ರೂಪಿಸಿಬೇಕಾಗಿರುತ್ತದೆ.

ಆದ್ದರಿಂದ ಆಯೋಗದ ವತಿಯಿಂದ ಹೊರರಾಜ್ಯಗಳಾದ ಪಂಜಾಬ್, ಹರಿಯಾಣ, ಕೇರಳ, ಮಹಾರಾಷ್ಟ್ರ, ಗುಜರಾತ್, ಆಂಧ್ರ ಮತ್ತು ದೆಹಲಿ ರಾಜ್ಯಗಳಿಗೆ ಈ ಕೆಳಕಂಡ ತಂಡದೊಂದಿಗೆ ಅಧ್ಯಯನ ಪ್ರವಾಸ ಕೈಗೊಳ್ಳಬೇಕಾಗಿರುತ್ತದೆ.

| ಕ್ರ.ಸಂ | ಹುದ್ದೆ | ಇಲಾಖೆ |
|---|---|---|
| 1 | ಅಧ್ಯಕ್ಷರು, | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ |
| 2 | ಅಧ್ಯಕ್ಷರು, | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ |
| 3 | ಕಾರ್ಯದರ್ಶಿ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ |
| 4 | ನಿರ್ದೇಶಕರು | ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು. |
| 5 | ಘನತ್ಯಾಜ್ಯ ಜಂಟಿ ಆಯುಕ್ತರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕ, ಬೆಂಗಳೂರು. |
| 6 | ಮುಖ್ಯ ಅಭಿಯಂತರರು | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ |
| 7 | ಆಯುಕ್ತರು, | ಮಹಾನಗರ ಪಾಲಿಕೆ |
| 8 | ನಿರ್ದೇಶಕರು, | ಗ್ರಾಮೀಣ ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ |
| 9 | ಯೋಜಸಾ ನಿರ್ದೇಶಕರು | ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ |
| 10 | ವೈದ್ಯರು (ಆರೋಗ್ಯಾಧಿಕಾರಿ), | ಚರ್ಮ ಹಾಗು ಸ್ವಚ್ಛತಾ ಕಾರ್ಮಿಕರಿಗೆ ಸಂಬಂಧಪಟ್ಟ ಖಾಯಿಲೆಗಳಿಗೆ ಚಿಕಿತ್ಸೆ ನೀಡುವ ವೈಧ್ಯರು |
| 11 | ಸಂಶೋಧನಾಧಿಕಾರಿ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ |
| 12 | ಸಂಚಾಲಕರು, | ಪೌರಕಾರ್ಮಿಕರಿಗೆ ಏಕರೂಪದ ಸುರಕ್ಷತಾ ಪರಿಕರಗಳನ್ನು ವಿತರಿಸಲು ರಚಿಸಿದ ಸಮಿತಿಯ ನಾಮ ನಿರ್ದೇಶಿತ ಸದಸ್ಯರು, |
| 13 | ಪೌರಕಾರ್ಮಿಕ | ಒಬ್ಬರು (ಆಯೋಗದ ವತಿಯಿಂದ) |
| 14 | ಯು.ಜಿ.ಡಿ. ಕಾರ್ಮಿಕ | ಒಬ್ಬರು (ಆಯೋಗದ ವತಿಯಿಂದ) |
| 15 | ಅಧ್ಯಕ್ಷರ ಆಪ್ತ ಕಾರ್ಯದರ್ಶಿ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ |
| 16 | Documentation and translator | ವಾರ್ತಾ ಇಲಾಖೆ, |
| 17 | ಅಧ್ಯಕ್ಷರ ಆಪ್ತ ಸಹಾಯಕರು | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ |

2022-26ನೇ ಸಾಲಿಗೆ ಸರ್ಕಾರಿ ಅನುಮೋದಿತ ರೂ.316.00 ಲಕ್ಷಗಳ ಆಯೋಗದ ಕ್ರಿಯಾ ಯೋಜನೆಯಲ್ಲಿ, ಹೊರರಾಜ್ಯಗಳಾದ ಪಂಜಾಬ್, ಹರಿಯಾಣ, ಕೇರಳ, ಮಹಾರಾಷ್ಟ್ರ, ಗುಜರಾತ್, ಆಂಧ್ರ ಮತ್ತು ದೆಹಲಿ ರಾಜ್ಯಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಕಾರ್ಯನಿರ್ವಹಿಸುವ ಕುರಿತು ಅಧ್ಯಯನಕ್ಕಾಗಿ ರೂ.30.00 ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ. ಆದ್ದರಿಂದ ಹೊರರಾಜ್ಯಗಳಾದ ಪಂಜಾಬ್, ಹರಿಯಾಣ, ಕೇರಳ,

ಮಹಾರಾಷ್ಟ್ರ, ಗುಜರಾತ್, ಆಂಧ್ರ ಮತ್ತು ದೆಹಲಿ ರಾಜ್ಯಗಳಿಗೆ ಮೇಲ್ಕಂಡಂತೆ ಅಧ್ಯಯನ ನಡೆಸುವ ತಂಡದಲ್ಲಿರುವ ಕ್ರ.ಸಂ.1,3 & 11 ರಿಂದ 17 ರವರೆಗಿನವರಿಗೆ (9 ಜನರಿಗೆ) ಅಧ್ಯಯನದ ಪ್ರವಾಸದ ವೆಚ್ಚವನ್ನು ಪ್ರಸಕ್ತ ಸಾಲಿಗೆ ಆಯೋಗದ ಲೆಕ್ಕ ಶೀರ್ಷಿಕೆ: 2225-01-277-0-69 (ಯೋಜನೆ) ಅಡಿ ಸದರಿ ಉದ್ದೇಶಕ್ಕೆ ನಿಗಧಿಪಡಿಸಿದ ರೂ.30.00 ಲಕ್ಷಗಳಲ್ಲಿ ಭರಿಸುವಂತೆ, ಮತ್ತು ತಂಡದಲ್ಲಿರುವ ಅನುಷ್ಠಾನ ಇಲಾಖಾ ಮುಖ್ಯಸ್ಥರು/ ಅಧಿಕಾರಿಗಳಿಗೆ ತಗಲುವ ಅಧ್ಯಯನ ಪ್ರವಾಸದ ವೆಚ್ಚವನ್ನು ಸಂಬಂಧಿಸಿದ ಇಲಾಖೆಗಳಿಂದ ಭರಿಸುವಂತೆ ಅನುಮತಿ ನೀಡಿ ಸರ್ಕಾರಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:SWD/90/SDC/2022(1), ಬೆಂಗಳೂರು,**

**ದಿನಾಂಕ: 06 ಸೆಪ್ಟೆಂಬರ್ 2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಹೊರ ರಾಜ್ಯಗಳಾದ ಪಂಜಾಬ್, ಹರಿಯಾಣ, ಕೇರಳ, ಮಹಾರಾಷ್ಟ್ರ, ಗುಜರಾತ್, ಆಂಧ್ರ ಮತ್ತು ದೆಹಲಿ ರಾಜ್ಯಗಳಲ್ಲಿ ಅಳವಡಿಸಿಕೊಂಡಿರುವ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಸ್ಯಾನಿಟೇಶನ್ ವ್ಯವಸ್ಥೆ, ಸ್ಕ್ಯಾವೆಂಜರ್ ಕ್ಲೀನಿಂಗ್ ಪದ್ಧತಿ ಹಾಗೂ ಸ್ಯಾನಿಟೇಶನ್ ಕಾರ್ಮಿಕರು/ಸ್ವಚ್ಛತಾ ಕಾರ್ಮಿಕರಿಗೆ ಆಯಾ ರಾಜ್ಯಗಳಲ್ಲಿ ಜಾರಿಯಲ್ಲಿರುವ ಸರ್ಕಾರಿ ಸವಲತ್ತುಗಳಾದ, ವಸತಿ, ಶಿಕ್ಷಣ, ಆರೋಗ್ಯ, ತರಬೇತಿ, ಕಾರ್ಮಿಕರು ಧರಿಸುವ ಸುರಕ್ಷತಾ ಪರಿಕರಗಳು, ವೇತನ, ವಿಶ್ರಾಂತಿ ಕೊಠಡಿ, ಸಮವಸ್ತ್ರ, ಇತ್ಯಾದಿಗಳ ವಿಷಯಗಳ ಕುರಿತು ಅಧ್ಯಯನ ನಡೆಸಲು ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ/ ಅಭಿವೃದ್ಧಿ ನಿಗಮ ಇವರನ್ನೊಳಗೊಂಡ ಈ ಕೆಳಗಿನ ಪಟ್ಟಿಯಲ್ಲಿರುವ ಇಲಾಖಾ ಮುಖ್ಯಸ್ಥರು/ ಅಧಿಕಾರಿಗಳು/ಸಿಬ್ಬಂದಿಗಳ ತಂಡ ಹೊರ ರಾಜ್ಯ ಅಧ್ಯಯನದ ಪ್ರವಾಸ ಕೈಗೊಳ್ಳಲು ಮತ್ತು ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿದೆ.

| ಕ್ರ.ಸಂ | ಹುದ್ದೆ | ಇಲಾಖೆ |
|---|---|---|
| 1 | ಅಧ್ಯಕ್ಷರು, | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ |
| 2 | ಅಧ್ಯಕ್ಷರು, | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ |
| 3 | ಕಾರ್ಯದರ್ಶಿ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ |
| 4 | ನಿರ್ದೇಶಕರು | ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು. |
| 5 | ಘನತ್ಯಾಜ್ಯ ಜಂಟಿ ಆಯುಕ್ತರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕ, ಬೆಂಗಳೂರು. |
| 6 | ಮುಖ್ಯ ಅಭಿಯಂತರರು | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ |
| 7 | ಆಯುಕ್ತರು, | ಮಹಾನಗರ ಪಾಲಿಕೆ |
| 8 | ನಿರ್ದೇಶಕರು, | ಗ್ರಾಮೀಣ ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ |
| 9 | ಯೋಜನಾ ನಿರ್ದೇಶಕರು | ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ |
| 10 | ವೈದ್ಯರು (ಆರೋಗ್ಯಾಧಿಕಾರಿ), | ಚರ್ಮ ಹಾಗು ಸ್ವಚ್ಛತಾ ಕಾರ್ಮಿಕರಿಗೆ ಸಂಬಂಧಪಟ್ಟ ಖಾಯಿಲೆಗಳಿಗೆ ಚಿಕಿತ್ಸೆ ನೀಡುವ ವೈದ್ಯರು |
| 11 | ಸಂಶೋಧನಾಧಿಕಾರಿ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ |
| 12 | ಸಂಚಾಲಕರು, | ಪೌರಕಾರ್ಮಿಕರಿಗೆ ಏಕರೂಪದ ಸುರಕ್ಷತಾ ಪರಿಕರಗಳನ್ನು ವಿತರಿಸಲು ರಚಿಸಿದ ಸಮಿತಿಯ ನಾಮ ನಿರ್ದೇಶಿತ ಸದಸ್ಯರು, |

| | | |
|---|---|---|
| 13 | ಪೌರಕಾರ್ಮಿಕ | ಒಬ್ಬರು (ಪೌರಾಡಳಿತ ನಿರ್ದೇಶನಾಲಯದ ವತಿಯಿಂದ) |
| 14 | ಯು.ಜಿ.ಡಿ. ಕಾರ್ಮಿಕ | ಒಬ್ಬರು (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ) |
| 15 | ಅಧ್ಯಕ್ಷರ ಆಪ್ತ ಕಾರ್ಯದರ್ಶಿ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ |
| 16 | Documentation and translator | ವಾರ್ತಾ ಇಲಾಖೆ, |
| 17 | ಅಧ್ಯಕ್ಷರ ಆಪ್ತ ಸಹಾಯಕರು | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ |

ಷರತ್ತುಗಳು:

1. ಅಧ್ಯಯನದ ಪ್ರವಾಸದ ತಂಡದಲ್ಲಿರುವ ಕ್ರಮ ಸಂಖ್ಯೆ: 1, 3, 11, 12 ಮತ್ತು 15 ರಿಂದ 17 ರವರೆಗಿನ (9) ಜನರಿಗೆ ಅಧ್ಯಯನದ ಪ್ರವಾಸದ ವೆಚ್ಚವನ್ನು ಪ್ರಸಕ್ತ ಸಾಲಿಗೆ ಆಯೋಗದ ಲೆಕ್ಕ ಶೀರ್ಷಿಕೆ: 2225-01-277-0-69 (ಯೋಜನೆ) ಅಡಿ ಸದರಿ ಉದ್ದೇಶಕ್ಕೆ ನಿಗಧಿಪಡಿಸಿದ ರೂ.30.00 ಲಕ್ಷ (ರೂಪಾಯಿ ಮೂವತ್ತು ಲಕ್ಷಗಳು ಮಾತ್ರ) ಗಳಲ್ಲಿ ಭರಿಸುವುದು.
2. ತಂಡದಲ್ಲಿರುವ ಇನ್ನುಳಿದ ಅನುಷ್ಠಾನ ಇಲಾಖಾ ಮುಖ್ಯಸ್ಥರು/ ಅಧಿಕಾರಿಗಳಿಗೆ ತಗಲುವ ಅಧ್ಯಯನ ಪ್ರವಾಸದ ವೆಚ್ಚವನ್ನು ಸಂಬಂಧಿಸಿದ ಇಲಾಖೆಗಳಿಂದ ಭರಿಸತಕ್ಕದ್ದು.
3. ಸದರಿ ಅಧ್ಯಯನದ ಪ್ರವಾಸವನ್ನು ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್, ಬೆಂಗಳೂರು ರವರ ಮುಖಾಂತರ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2022, ದಿನಾಂಕ:04-04-2022 ರಲ್ಲಿ ಸರ್ಕಾರದ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಿವಲಿಂಗ ಪ್ರಭು ವಾಲಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು, (ಎ&ಇ, ಲೆಕ್ಕ ಪರಿಶೋಧನೆ1&2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು.

4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ, ಬೆಂಗಳೂರು.
5. ಸಂಬಂಧಿಸಿದ ಇಲಾಖಾ ಮುಖ್ಯಸ್ಥರುಗಳು/ಅಧಿಕಾರಿಗಳು/ನೌಕರರುಗಳಿಗೆ (ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು ಇವರ ಮುಖಾಂತರ).
6. ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್, ಬೆಂಗಳೂರು
7. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು

ಪ್ರತಿ ಮಾಹಿತಿಗಾಗಿ

1. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ.

****